

ಎರಡು ನಕ್ಷತ್ರಗಳು

ನಿಲ್ಲುವುದು ಬಾಣದ ಥರ ಇರಬೇಕು ಎಂದು ಹುಣಸೂರು ಕೃಷ್ಣಮೂರ್ತಿಗಳು ಹೇಳಿದ್ದರು. ಚಿತ್ರೀಕರಣಕ್ಕೆ ಎರಡು ದಿನಗಳ ಮುಂಚೆಯೇ ನಾನು ಆ ಜಾಗಕ್ಕೆ ತೆರಳಿ ಸ್ವಸ್ತಿಕ್ ಮತ್ತು ಬಾಣದ ಚಿತ್ರ ಬರೆಸಿ ಬಂದಿದ್ದೆ. ಆ ಗೆರೆಯ ಮೇಲೆಯೇ ಜನರು ನಿಂತುಕೊಳ್ಳುತ್ತಾರೆ. ಆಗ ಅದು ಸ್ವಸ್ತಿಕ್ ಥರ, ಬಾಣದ ಥರ ಕಾಣಿಸುತ್ತದೆ. ಟಾಪ್ ಆ್ಯಂಗಲ್‌ನಲ್ಲಿ ಚಿತ್ರೀಕರಿಸಿದಾಗ ಅದೊಂದು ಅಮೋಘ ದೃಶ್ಯವಾಗಿ ಕಾಣಿಸುತ್ತದೆ.

ಈ ಐದು ಸಾವಿರ ಜನರನ್ನು ಶೂಟಿಂಗ್‌ಗಾಗಿ ನಿಲ್ಲಿಸಿ ನಿಯಂತ್ರಿಸುವುದು ಸಾಮಾನ್ಯ ಕೆಲಸ ಆಗಿರಲಿಲ್ಲ. ಒಬ್ಬ ಅಲ್ಲೆಲ್ಲೋ ಮಾತಾಡುತ್ತಿರುತ್ತಾನೆ. ಇನ್ನೊಬ್ಬ ಬೀಡಿ ಸೇದುತ್ತಿರುತ್ತಾನೆ. ಪೌರಾಣಿಕ ಚಿತ್ರ ಚಿತ್ರೀಕರಿಸುವಾಗ ಆ ಮೈದಾನದಲ್ಲಿ ಸಿಗರೇಟ್ ಪ್ಯಾಕ್, ಬೆಂಕಿಪೊಟ್ಟಣ ಬಿದ್ದಿರಬಾರದು. ಚಿತ್ರೀಕರಣಕ್ಕೂ ಮುಂಚೆ ನಾನು ಇಡೀ ಮೈದಾನ ಅಡ್ಡಾಡಿ ಇಂಥ ಕಸಗಳನ್ನು ತೆಗೆಸುತ್ತಿದ್ದೆ.

ಈಗ ಇವೆಲ್ಲ ತುಂಬ ಸುಲಭ. ಇಂದು ನೂರೈವತ್ತು ಜನರನ್ನು ಇಟ್ಟುಕೊಂಡು ಎರಡೂ ಕಡೆ ಖಾಲಿ ಜಾಗ ಬಿಟ್ಟು ಚಿತ್ರೀಕರಣ ಮಾಡಿಬಿಡಬಹುದು. ನಂತರ ಅವರನ್ನೇ ಕಂಪ್ಯೂಟರ್ ಗ್ರಾಫಿಕ್ ಮೂಲಕ ದ್ವಿಗುಣಿಸಿಕೊಳ್ಳಬಹುದು. ನಾನು 'ಗಂಡುಗಲಿ ಕುಮಾರರಾಮ' ಸಿನಿಮಾ ಮಾಡಿದಾಗ ಅದರಲ್ಲಿಯೂ ಯುದ್ಧದ ಸನ್ನಿವೇಶಗಳು ಬರುತ್ತವೆ. ಆಗ ಅಲ್ಲಿ ವಾಹನಗಳ ಚಕ್ರಗಳ ಗುರುತು, ಕಸ ಕಡ್ಡಿ ಎಲ್ಲವೂ ಇರುತ್ತಿತ್ತು. ಹಾಗೆಯೇ ಚಿತ್ರೀಕರಣ ಮಾಡಿಕೊಳ್ಳುತ್ತಿದ್ದೆವು. ನಂತರ ಕಂಪ್ಯೂಟರ್‌ನಲ್ಲಿ ಡಸ್ಟ್‌ಕೋಟ್ ಅಂತ ಮಾಡುತ್ತಿದ್ದರು. ಆಗ ಆ ಎಲ್ಲ ಗುರುತುಗಳು ಮಾಯವಾಗಿ ಬಿಡುತ್ತವೆ. ಇವೆಲ್ಲ ತಂತ್ರಜ್ಞಾನ ನಮ್ಮ ಕೆಲಸವನ್ನು ಸುಲಭಗೊಳಿಸಿರುವ ಬಗೆ.

ಹಿಂದೆ ದ್ವಿಪಾತ್ರ, ತ್ರಿಪಾತ್ರಗಳನ್ನೆಲ್ಲ ಮಾಡುವಾಗ ತುಂಬ ಕಷ್ಟ ಇತ್ತು. ಇಂಥ ಸವಾಲುಗಳನ್ನೆಲ್ಲ ಸಮರ್ಥವಾಗಿ ಎದುರಿಸಿದ್ದು ರಾಜಕುಮಾರ್. ಅವರನ್ನು ಬಿಟ್ಟರೆ ಮತ್ಯಾರೂ ಂತಹ ಸಮರ್ಥರು ನನಗೆ ಕಾಣಿಸುವುದಿಲ್ಲ. 'ಬಬ್ರುವಾಹನ' ಸಿನಿಮಾ ಚಿತ್ರೀಕರಣದ ಸಮಯದಲ್ಲಿ ಗ್ರಾಫಿಕ್ಸ್ ಇರಲಿಲ್ಲ. ಇಷ್ಟೊಂದು ತಂತ್ರಜ್ಞಾನ ಸೌಲಭ್ಯಗಳೂ ಇರಲಿಲ್ಲ. ಅದರಲ್ಲಿ ಅರ್ಜುನ ಮತ್ತು ಬಬ್ರುವಾಹನ ಎರಡೂ ಪಾತ್ರಗಳನ್ನು ರಾಜಕುಮಾರ್ ನಿರ್ವಹಿಸುತ್ತಿದ್ದರು. ಒಂದು ಪಾತ್ರದ ದೃಶ್ಯಗಳನ್ನು ಚಿತ್ರೀಕರಿಸಿಕೊಳ್ಳುವುದು, ನಂತರದ ಆ ಪಾತ್ರವನ್ನು ಮಾಸ್ಕ್ ಮಾಡಿ ಮತ್ತೊಂದು ಪಾತ್ರವನ್ನು ಚಿತ್ರೀಕರಿಸಿಕೊಳ್ಳುತ್ತಿದ್ದೆವು. ನಂತರ ಎರಡನ್ನೂ ಲ್ಯಾಬ್‌ನಲ್ಲಿ ಕೂಡಿಸುತ್ತಿದ್ದೆವು.

ಒಮ್ಮೆ ಹೀಗಾಯ್ತು: ಬಬ್ರುವಾಹನ ಬಂದು ಅರ್ಜುನನ್ನು ಭೇಟಿ ಮಾಡುವ ದೃಶ್ಯವನ್ನು ಮರುದಿನ ಚಿತ್ರೀಕರಿಸಿಕೊಳ್ಳಬೇಕಿತ್ತು. ಬಬ್ರುವಾಹನನಿಗೆ ತಂದೆಯನ್ನು ನೋಡುವ ಹಂಬಲ. ವಿನಯ, ನಮ್ರಭಾವ, ಭಕ್ತಿ ಎಲ್ಲವೂ ಬಬ್ರುವಾಹನನಲ್ಲಿರುತ್ತದೆ. ಅರ್ಜುನನಿಗೆ ತನ್ನ ಎದುರಿಗೆ ಇರುವ ತನ್ನದೇ ರೂಪಿನ ವ್ಯಕ್ತಿ ತನ್ನ ಮಗ ಎಂದು ಗುರ್ತು ಹಿಡಿಯಲಾಗದಿರುವ ಪರಿಸ್ಥಿತಿ. ಅದೊಂದು ಶಾಪ ಅವನಿಗೆ.

ಒಂದು ಪಾತ್ರದಲ್ಲಿ ಪರಕಾಯ ಪ್ರವೇಶ ಮಾಡಲಾಗದೆ ಇಂಥ ಭಾವಾಭಿವ್ಯಕ್ತಿ ಸಾಧ್ಯವೇ ಇಲ್ಲ. ರಾಜಕುಮಾರ್ ಅವರಿಗೆ ಆ ಶಕ್ತಿ ಇತ್ತು.

ರಾಜಕುಮಾರ್ ಹಿಂದಿನ ದಿನವೇ ಎರಡೂ ಪಾತ್ರಗಳ ಸಂಭಾಷಣೆಗಳ ಪ್ರತಿಯನ್ನು ಮನೆಗೆ ತೆಗೆದುಕೊಂಡು ಹೋಗಿದ್ದರು. ಮರುದಿನ ಸೆಟ್‌ಗೆ ಬಂದಾಗ ಹುಣಸೂರು ಅವರು, 'ಯಾವ ಪಾತ್ರ ಮಾಡ್ತಾರೆ ಕೇಳು, ಅರ್ಜುನನೋ ಬಬ್ರುವಾಹನನೋ?' ಎಂದರು. ನಾನು ಹೋಗಿ 'ಯಾವ

**26ನೇ ಪುಟಕ್ಕೆ**



